ಪಿ ಡಬ್ಲ್ಯೂ.1 : ವಿ ಗೋವಿಂದರಾಜು

ದಿನಾಂಕ 05.06.2023 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು – ಪ್ರತಿವಾದಿ ಪರ ಶ್ರೀ ಎಸ್ ಆರ್ ಎ ವಕೀಲರಿಂದಃ**

ದಾವೆಯಲ್ಲಿ ನಾನು ಸಲ್ಲಿಸಿರುವ ಎಲ್ಲಾ ದಾಖಲೆಗಳ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ದಾವೆಯಲ್ಲಿ ಸಲ್ಲಿಸಿರುವ ಒಂದು ಕಚ್ಚಾ ನಕ್ಷೆಗೆ ನಾನು ಸಹಿಯನ್ನು ಮಾಡಿರುತ್ತೇನೆ. ಸಾಕ್ಷಿಗೆ ಸದರಿ ಕಚ್ಚಾ ನಕ್ಷೆಯನ್ನು ತೋರಿ ಸದರಿ ಕಚ್ಚಾ ನಕ್ಷೆಯಲ್ಲಿ ನಿಮ್ಮ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ಸಹಿ ಇರುವುದಿಲ್ಲ ಎಂದು ನುಡಿಯುತ್ತಾರೆ.

ನಿಪಿಃ 1 ರಲ್ಲಿ ನಮೂದು ಇರುವ ಆಸ್ತಿಯು ನಿಮಗೆ ಹೇಗೆ ಬಂದಿತು ಎಂದರೆ ಸಾಕ್ಷಿಯು ನಮ್ಮ ಅಜ್ಜಿಯಿಂದ ಬಂದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಅಜ್ಜಿಯ ಹೆಸರು ರಂಗಮ್ಮ.

ನಿಮ್ಮ ಅಜ್ಜಿಯವರಿಗೆ ನಿಪಿಃ 1 ರಲ್ಲಿ ನಮೂದು ಇರುವ ಆಸ್ತಿಯು ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ನನ್ನ ಅಜ್ಜಿಯ ಗಂಡನು ಮರಣ ಹೊಂದಿದಾಗ ಆಕೆಯ ಭಾವನವರುಗಳು ಸೇರಿ ರಿಜಿಸ್ಟರ್ ಮಾಡಿಕೊಟ್ಟಿರುತ್ತಾರೆ ಎಂದು ನನ್ನ ಅಜ್ಜಿ ನನಗೆ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ಆ ಬಗ್ಗೆ ನಾನು ದಾಖಲಾತಿಗಳು ಇವೆಯೋ ಇಲ್ಲವೋ ಎಂಬ ಬಗ್ಗೆ ಪರಿಶೀಲನೆ ಮಾಡಿರುವುದಿಲ್ಲ.

ಪಿ ಡಬ್ಲ್ಯೂ 1 : ವಿ ಗೋವಿಂದರಾಜು

ನನ್ನ ಅಜ್ಜಿಯ ಗಂಡನು ಮರಣ ಹೊಂದಿದಾಗ ಆಕೆಯ ಭಾವನವರುಗಳು ಸೇರಿ ರಿಜಿಸ್ಟರ್ ಮಾಡಿಕೊಟ್ಟಿರುತ್ತಾರೆ ಎಂದು ನಾನು ತಿಳಿಸಿದ್ದು, ಸದರಿ ಅಂಶವು ನಿಪಿಃ 1 ರಲ್ಲಿ ನಮೂದು ಇರುವುದಿಲ್ಲ.

ನಿಪಿಃ 1 ಸೆಟಲ್ ಮೆಂಟ್ ಡೀಡ್ ಅನ್ನು ಬರೆಸಲು ನನ್ನ ಅಜ್ಜಿಗೆ ಹಕ್ಕು ಭಾಧ್ಯತೆ ಇತ್ತೇ ಎಂದರೆ ಸಾಕ್ಷಿಯು ನನ್ನ ಗಮನಕ್ಕೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಪಿಃ 1 ಸೆಟಲ್ ಮೆಂಟ್ ಡೀಡ್ ನಲ್ಲಿ ಇರುವ ಚೆಕ್ಕು ಬಂದಿಯನ್ನು ನಾನು ಗಮನಿಸಿರುತ್ತೇನೆ.

ನಿಪಿಃ 1 ಸೆಟಲ್ ಮೆಂಟ್ ಡೀಡ್ ನಲ್ಲಿ ಇರುವ ಚೆಕ್ಕು ಬಂದಿಯ ಪ್ರಕಾರವೇ ನೀವು ದಾವೆಯೊಂದಿಗೆ ಸಲ್ಲಿಸಿರುವ ಕಚ್ಚಾ ನಕ್ಷೆಯ ಚೆಕ್ಕು ಬಂದಿ ಇರುತ್ತದೆಯೇ ಎಂದರೆ ಸಾಕ್ಷಿಯು ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಾನು ಸಲ್ಲಿಸಿರುವ ಚೆಕ್ಕುಬಂದಿಯ ಪ್ರಕಾರ ನನ್ನ ಆಸ್ತಿ ಇರುತ್ತದೆ ಎಂದು ಸ್ವತಃ ನುಡಿಯುತ್ತಾರೆ.

ಪ್ರಸ್ತುತ ದಾವೆಯಲ್ಲಿ ಎ ಷೆಡ್ಯೂಲ್ ಆಸ್ತಿಗೆ ಚೆಕ್ಕುಬಂದಿ ಪೂರ್ವಕ್ಕೆ ಪ್ರತಿವಾದಿಯ ಮನೆ ಮತ್ತು ಜವರನ ಮನೆಗೆ ಹೋಗುವ ದಾರಿ ಎಂದು ನಮೂದು ಇದ್ದು ಸದರಿ ಅಂಶ ಸರಿ ಇರುತ್ತದೆ. ಪಶ್ಚಿಮಕ್ಕೆ ದೊಡ್ಡನಾಯಕರ ಮನೆ ಎಂದರೆ ಸರಿ. ಉತ್ತರಕ್ಕೆ ದೊಡ್ಡನಾಕನ ಮನೆ ಹಾಗೂ ದಾರಿ ಎಂದು ನಮೂದು ಇದೆ ಎಂದರೆ ಸರಿ. ದಕ್ಷಿಣಕ್ಕೆ ಜವರ ಮತ್ತು ಮಾದರವರ ಮನೆ ಎಂದು ನಮೂದು ಇರುತ್ತದೆ ಎಂದರೆ ಸರಿ. ಈ ಮೇಲೆ ಹೇಳಿದ ಚೆಕ್ಕುಬಂದಿಯಲ್ಲಿ ನಮೂದು ಇರುವ ಅಂಶಗಳು ನಿಪಿಃ 1 ರಲ್ಲಿ ನಮೂದು ಇದೆಯೇ ಎಂದರೆ ಸಾಕ್ಷಿಯು ನನ್ನ ಗಮನಕ್ಕೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿ ಮಾದಾನಯಕ ಪ್ರಸ್ತುತ ದಾವೆಯಲ್ಲಿ ಯಾವ ತಕರಾರು ಸಲ್ಲಿಸಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆ.

ಸಾಕ್ಷಿಗೆ 9 ಫೋಟೋಗಳನ್ನು ತೋರಿಸಿ, ಸದರಿ ಫೋಟೋಗಳಲ್ಲಿ ನೀವು ದಾವೆ ಸಲ್ಲಿಸಿರುವ ಆಸ್ತಿ ಇದೆಯೋ ಇಲ್ಲವೋ ಎಂದರೆ ಸಾಕ್ಷಿಯು ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಸದರಿ ಫೊಟೋಗಳು ದಾವಾ ಷೆಡ್ಯೂಲ್ ಆಸ್ತಿಗೆ ಸಂಬಂಧಿದ ಫೋಟೋಗಳು ಎಂದು ಒಪ್ಪಿ ಗುರುತಿಸಿದ್ದರಿಂದ ಸದರಿ ಫೊಟೋಗಳನ್ನು ನಿಡಿಃ 1 ರಿಂದ ನಿಡಿಃ 9 ಎಂದು ಗುರುತಿಸಲಾಯಿತು.

ನಿಡಿಃ 1 ಫೋಟೋದಲ್ಲಿ ಕಾಣಿಸಿರುವ ಇಟ್ಟಿಗೆಯ ಮನೆ ಬಿ ಷೆಡ್ಯೂಲ್ ಆಸ್ತಿ ಎಂದರೆ ಸರಿ.

ನಿಡಿಃ2 ರ ಫೊಟೋದಲ್ಲಿ ಪ್ರತಿವಾದಿಯು ಉತ್ತರ ದಿಕ್ಕಿನಲ್ಲಿ ನಿಂತಿರುತ್ತಾರೆ. ನಿಡಿಃ3 ರ ಫೊಟೋದಲ್ಲಿ ಪ್ರತಿವಾದಿಯು ಪೂರ್ವ ದಿಕ್ಕಿನಲ್ಲಿ ನಿಂತಿರುತ್ತಾರೆ.

ನಿಡಿಃ4 ರ ಫೊಟೋದಲ್ಲಿ ಕಾಣುತ್ತಿರುವ ಹಳೆಯ ಹೆಂಚಿನ ಮನೆಯು ಪ್ರತಿವಾದಿಯ ಮನೆಯಾಗಿರುತ್ತದೆ.

ನಿಡಿಃ1 ಕ್ಕೆ ಅನುಗುಣವಾಗಿ ನಿಡಿಃ5 ಮತ್ತು ನಿಡಿಃ 6 ರ ಫೋಟೋಗಳಲ್ಲಿ ದಾರಿ ಇರುತ್ತದೆ ಎಂದರೆ ಸರಿ.

ಪಿ ಡಬ್ಲ್ಯೂ 1 : ವಿ ಗೋವಿಂದರಾಜು

ಬಿ ಷೆಡ್ಯೂಲ್ ಆಸ್ತಿಯ ಉತ್ತರ ದಿಕ್ಕಿಗೆ ದಾರಿ ಇರುತ್ತದೆ ಎಂದು ನಿಮ್ಮ ದಾವೆಯಲ್ಲಿ ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿಯು ನಮೂದು ಮಾಡಿರುತ್ತೇನೆ ಎಂದು ನುಡಿಯತ್ತಾರೆ.

ದಾವೆಯಲ್ಲಿ ಉತ್ತರಕ್ಕೆ ದೊಡ್ಡ ನಾಯಕನ ಮನೆ ಮತ್ತು ದಾರಿ ಎಂದು ನಮೂದು ಇದ್ದು ಸದರಿ ಮನೆಯಿಂದ ಯಾವ ದಿಕ್ಕಿಗೆ ದಾರಿ ಇರುತ್ತದೆ ಎಂದರೆ ಸಾಕ್ಷಿಯು ಮನೆಯಿಂದ ದಕ್ಷಿಣ ದಿಕ್ಕಿಗೆ ಇರುತ್ತದೆ ಎಂದು ನುಡಿಯುತ್ತಾರೆ.

ನಿಪಿಃ 1 ಸೆಟಲ್ ಮೆಂಟ್ ಡೀಡ್ ನಲ್ಲಿ ಪೂರ್ವಕ್ಕೆ ದಾರಿ ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿಯು ಜವರನ ಮನೆಗೆ ಹೋಗುವ ದಾರಿ ಎಂದು ನಮೂದು ಇರುತ್ತದೆ ಎಂದು ನುಡಿಯುತ್ತಾರೆ.

ನಿಪಿಃ 1 ರ ಪುಟ ಸಂಖ್ಯೆ 4 ಮತ್ತು 5 ರಲ್ಲಿ ನಮೂದು ಇರುವ ಚೆಕ್ಕುಬಂದಿಯನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ಚೆಕ್ಕುಬಂದಿಗೆ ನನ್ನ ತಕರಾರು ಇರುವುದಿಲ್ಲ. ನಿಪಿಃ 1 ರಂತೆ ನನ್ನ ದಾವೆಯೊಂದಿಗೆ ಸಲ್ಲಿಸಿರುವ ಕಚ್ಚಾ ನಕ್ಷೆಯನ್ನು ತಯಾರಿಸಿರುವುದಿಲ್ಲ ಎಂದರೆ ಸರಿ.

ನಿಪಿಃ 1 ರಲ್ಲಿ ಮೂರುವರೆ ಅಂಕಣ ಮನೆ ಎಂದು ನಮೂದು ಇದ್ದು ಸದರಿ ಮನೆ ಇದೆಯೋ ಇಲ್ಲವೋ ಎಂದರೆ ಸಾಕ್ಷಿಯು ಇದೆ ಎಂದು ನುಡಿಯುತ್ತಾರೆ. ಸದರಿ

ಮೂರುವರೆ ಅಂಕಣ ಮನೆಯು ದಾವಾ ಬಿ ಷೆಡ್ಯೂಲ್ ಆಸ್ತಿಯ ಪೂರ್ವ ದಿಕ್ಕಿಗೆ ಇರುತ್ತದೆ. ನಿಪಿಃ 1 ರ ಪ್ರಕಾರ ರಿ ಮೂರುವರೆ ಅಂಕಣ ಮನೆಯಿಂದ ಪೂರ್ವಕ್ಕೆ ಅಂಗಳ ಇದೆ ಎಂದರೆ ಸರಿ.

ನಿಪಿಃ 1 ರ ಪ್ರಕಾರ ಪೂರ್ವಕ್ಕೆ ಅಂಗಳ ಹಾಗೂ ಪಶ್ಚಿಮಕ್ಕೆ ಮನೆ ಇರುತ್ತದೆ ಎಂದರೆ ಸರಿ. ಸದರಿ ಮನೆ ಮತ್ತು ಅಂಗಳದ ಖಾತೆ ನಿಮ್ಮ ಅಜ್ಜಿ ರಂಗಮ್ಮನ ಹೆಸರಿನಲ್ಲಾಗಲೀ, ನಿಮ್ಮ ಅಜ್ಜಿಯ ಗಂಡನ ಹೆಸರಿನಲ್ಲಾಗಲೀ ಅಥವಾ ನಿಮ್ಮ ತಾಯಿಯ ಅಥವಾ ನಿಮ್ಮ ಹೆಸರಿನಲ್ಲಿ ಇರುತ್ತದೆಯೇ ಎಂದರೆ ಇರುವುದಿಲ್ಲ.

ದಾವಾ ಷೆಡ್ಯೂಲ್ ಎ ಮತ್ತು ಬಿ ಆಸ್ತಿಯ ಖಾತೆಗೆ ಸಂಬಂಧಿಸಿದಂತೆ 1982 ನೇ ಇಸವಿಯಿಂದ ಮೈಸೂರು ಜಿಲ್ಲಾ ಉಪ ವಿಭಾಗ ಅಧಿಕಾರಿಗಳ ಕಾಲದಿಂದಲೂ ನಿಮ್ಮ ಹಾಗೂ ಪ್ರತಿವಾದಿಗಳ ನಡುವೆ ತಕರಾರು ಇರುತ್ತದೆ ಎಂದರೆ ಸರಿ.

1982 ನೇ ಇಸವಿಯಲ್ಲಿ ನನ್ನ ತಾಯಿ ಖಾತೆಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಆ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಉಪ ವಿಭಾಗ ಅಧಿಕಾರಿಗಳು ನನಗೆ ನನ್ನ ತಾಯಿಗೆ ನೋಟೀಸ್ ಜಾರಿ ಮಾಡಿದ್ದರು ಎಂದರೆ ಸರಿ. ಮೈಸೂರು ಜಿಲ್ಲಾ ಉಪ ವಿಭಾಗ ಅಧಿಕಾರಿಗಳ ಮುಂದೆ ಖಾತೆಗೆ ಸಂಬಂಧಿಸಿದಂತೆ ಯಾವುದೇ ಆದೇಶವಾಗಿರುವುದಿಲ್ಲ.

ಮಂಡಲ ಪಂಚಾಯತಿ ಇದ್ದ ಕಾಲದಲ್ಲಿ ದಾವಾ ಷೆಡ್ಯೂಲ್ ಎ ಮತ್ತು ಬಿ ಆಸ್ತಿಯ ಖಾತೆಯನ್ನು ಮಾಡಿಕೊಂಡಿರುವುದಿಲ್ಲ ಎಂದರೆ ಸರಿ.

ದಾವಾ ಷೆಡ್ಯೂಲ್ ಎ ಮತ್ತು ಬಿ ಆಸ್ತಿಯ ನಮ್ಮ ಹಾಗೂ ಪ್ರತಿವಾದಿಗಳ ನಡುವೆ 1982 ರಿಂದ ವಿವಾದ ಪ್ರಾರಂಭವಾಗಿದೆ ಎಂದರೆ ಸರಿ.

ಪಿ ಡಬ್ಲ್ಯೂ 1 : ವಿ ಗೋವಿಂದರಾಜು

ದಾವಾ ಬಿ ಷೆಡ್ಯೂಲ್ ಆಸ್ತಿಯ ಸ್ವಾಧೀನವನ್ನು ಪ್ರಸ್ತುತ ದಾವೆಯಲ್ಲಿ ಪರಿಹಾರ ಕೋರಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು ಸ್ವಾಧೀನವನ್ನು ಕೋರಿರುತ್ತೇನೆ ಎಂದು ನುಡಿಯುತ್ತಾರೆ.

ದಾವಾ ಬಿ ಷೆಡ್ಯೂಲ್ ಆಸ್ತಿಯ ಸ್ವಾಧೀನವನ್ನು ನೀವು ಯಾವಾಗ ಕಳೆದುಕೊಂಡಿರುತ್ತೀರಿ ಎಂದರೆ ಸಾಕ್ಷಿಯು 2017 ನೇ ಸಾಲಿನಲ್ಲಿ ಕಳೆದುಕೊಂಡಿರುತ್ತೇನೆ. ಸಾಕ್ಷಿಯು ಮುಂದುವರೆದು ಪ್ರತಿವಾದಿಯು ದಿನಾಂಕಃ 18.06.2017 ರಂದು ಗೋಡೆಯನ್ನು ಕಟ್ಟಲು ಪ್ರಾರಂಭಿಸಿರುತ್ತಾರೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲುಃ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ನಂದಿನಿ ಎಂ.ಎನ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ.